ಜಗತ್ತು ಮಾನವ ನಿರ್ಮಿತವಾದುದು. ಕೊರೊನಾ ವೈರಸ್ ಎನ್ನುವ ಮಹಾಮಾರಿ ಮಾನವನಿಂದ ಹುಟ್ಟಿ ಮಾನವನನ್ನೆ ಬಲಿ ತೆಗೆದುಕೊಳ್ಳುತ್ತಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.



ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಭಾರತ ಲಾಕ್ ಡೌನ್ ಆಗಿರುವ ಸಂದರ್ಭದಲ್ಲಿ ಹೊಳಲ್ಕೆರೆ ತಾಲ್ಲೂಕಿನ ಚಿತ್ರಹಳ್ಳಿ, ಚಿತ್ರದುರ್ಗ ತಾಲ್ಲೂಕಿನ ಹಳಿಯೂರು ಹಾಗೂ ನಗರದ ವಿನಾಯಕ ಕಲ್ಯಾಣ ಮಂಟಪದಲ್ಲಿರುವ ಹಕ್ಕಿಪಿಕ್ಕಿ, ಕೊರಮ, ಕೊರಚ, ಸುಡುಗಾಡು ಸಿದ್ಧರು ಮತ್ತಿತರ ನಿರಾಶ್ರಿತರಿಗೆ ಮುರುಘಾಮಠದಿಂದ ಆಹಾರ ವಿತರಿಸಿ ಶ್ರೀಗಳು ಮಾತನಾಡಿದರು.

ಸಾಂಕ್ರಾಮಿಕ ರೋಗದಿಂದ ಸಾಕಷ್ಟು ಜನರು ತೊಂದರೆಗೆ ಒಳಗಾಗುತ್ತಿದ್ದಾರೆ. ಇಂದಿನ ಅಗತ್ಯವೆಂದರೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು. ವೈರಸ್ ಹರಡದಂತೆ ಮುನ್ನೆಚ್ಚರಿಕೆ ವಹಿಸುವಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಪ್ರಾಥಮಿಕ ಹಂತವಾಗಿದೆ. ಯಾವುದೇ ಹಂತದಲ್ಲೂ ಜನರು ಗುಂಪು ಸೇರುವುದನ್ನು ತಡೆಯಬೇಕು. ಸರ್ಕಾರ ಅಥವಾ ಪೊಲೀಸ್ ಮುಖಾಂತರವಾಗಿಯೇ ಕ್ರಮಗಳನ್ನು ಜರುಗಿಸುವುದಕ್ಕಿಂತ ಜನರೆ ತಮ್ಮ ಸಂರಕ್ಷಣೆ ಮಾಡಿಕೊಳ್ಳುವಂತಾದರೆ ಕಠಿಣತರವಾದ ಕ್ರಮಗಳ ಅಗತ್ಯ ಇರುವುದಿಲ್ಲ. ಅತ್ಯಂತ ಅನಿವಾರ್ಯವಾಗಿರುವ ಸಂದರ್ಭದಲ್ಲಿ ರಸ್ತೆಗೆ ಬಂದಾಗ ಮಾಸ್ಕ್ ಬಳಸುವುದು ಕಡ್ಡಾಯ ಆಗಬೇಕು. ಯಾವುದೇ ವ್ಯಕ್ತಿ ಮಾಸ್ಕ್ ಧರಿಸುವುದರಿಂದ ಬೇರೆಯವರಿಗೆ ವೈರಾಣು ಹರಡದಂತೆ ಬೇರೆಯವರಿಂದ ತನಗೆ ಹರಡದಂತೆ ಮುಂಜಾಗ್ರತೆ ವಹಿಸಬೇಕಾಗುತ್ತದೆ. ಸಾಮಾಜಿಕ ಅಂತರದ ಜೊತೆಯಲ್ಲಿ ಇಂದಿನ ಅನಿವಾರ್ಯ ಎಂದರೆ ದಿಗ್ಬಂಧನ. ಪ್ರತಿಯೊಬ್ಬರು ತಮಗೆ ತಾವೆ ದಿಗ್ಬಂಧನ ವಿಧಿಸಿಕೊಳ್ಳಬೇಕು. ದಿಗ್ಬಂಧನ ಜೊತೆಯಲ್ಲಿ ಮತ್ತೊಂದು ಅಗತ್ಯವಾದ ಕ್ರಮವೆಂದರೆ ಗೃಹಬಂಧನ. ತಮ್ಮ ಹಾಗು ತಮ್ಮವರ ಪ್ರಾಣರಕ್ಷಣೆಗಾಗಿ ದಿಗ್ಬಂಧನ ಮತ್ತು ಗೃಹಬಂಧನ ಅತ್ಯಂತ ಅನಿವಾರ್ಯ ಎಂದು ತಿಳಿಸಿದರು.



ಹಲವಾರು ಶತಮಾನಗಳಿಂದಲೂ ಪ್ಲೇಗು, ಚಿಕನ್‌ಗುನ್ಯ, ಡೆಂಗ್ಯೂ ಮೊದಲಾದ ಸಾಂಕ್ರಾಮಿಕ ರೋಗಗಳನ್ನು ಎದುರಿಸುತ್ತ ಬರಲಾಗಿದೆ. ಕೊರೊನಾ ವೈರಸ್‌ನಂತಹ ತೀವ್ರತರವಾದ ರೋಗವು ಇಡೀ ದೇಶವನ್ನು ಆವರಿಸಿರುವುದು ವಿಷಾದನೀಯ. ವಿದೇಶಗಳಿಗೆ ಓದಲು, ದುಡಿಯಲು ಮತ್ತು ಪವಿತ್ರಯಾತ್ರೆ ಮಾಡಲು ಹೋದವರಿಂದ ದೇಶದಲ್ಲಿ ವೈರಸ್ ಹರಡುತ್ತ ಹೋಯಿತು. ವೈದ್ಯಕೀಯ ಲೋಕಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿರುವ ಕೊರೊನಾವನ್ನು ನಾಶ ಮಾಡಲು ನಮ್ಮ ಸ್ಥಳಗಳನ್ನು ಬಿಟ್ಟು ಹೋಗದೆ ಮನೆಯಲ್ಲಿದ್ದರೆ ಸಾಕು. ಜನಸಾಮಾನ್ಯರು ಯಾವುದೆ ತೊಂದರೆಗೆ ಒಳಗಾಗಬಾರದೆಂದು ಕೇಂದ್ರಸರ್ಕಾರದ ಹಣಕಾಸು ಮಂತ್ರಿಗಳಾದ ಶ್ರೀಮತಿ ನಿರ್ಮಲಾ ಸೀತರಾಮನ್ ಅವರು 1.70ಲಕ್ಷ ಕೋಟಿ ಅನುದಾನ ನೀಡುವುದರೊಂದಿಗೆ ಹಸಿದವರಿಗೆ ಅನ್ನ ನೀಡುವ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಬಡ್ಡಿ ವಿನಾಯ್ತಿಯೊಂದಿಗೆ ಸಾಲದ ಕಂತುಗಳನ್ನು ಕಟ್ಟಲು ಮೂರುತಿಂಗಳ ಸಮಯಾವಕಾಶವನ್ನು ಕಲ್ಪಿಸಿದ್ದಾರೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿ

ಬಿ.ಎಸ್.ಯಡಿಯೂರಪ್ಪನವರು ಇಂದಿರಾ ಕ್ಯಾಂಟೀನ್‌ನಲ್ಲಿ ಊಟದ ವ್ಯವಸ್ಥೆ ಮುಂದುವರಿಸಿದ್ದಾರೆ. ಮಧ್ಯಮ, ಬಡವರ್ಗದವರು ಎನ್ನದೆ ವಿದ್ಯುತ್‌ಬಿಲ್, ನೀರಿನಬಿಲ್ ಮೊದಲಾದುವನ್ನು ಕಟ್ಟುವ ದಿನಾಂಕವನ್ನು ಮುಂದೂಡಿದ್ದಾರೆ. ಅನೇಕ ಸಂಘ-ಸಂಸ್ಥೆಗಳು ಬಡವರು, ಭಿಕ್ಷುಕರು ಎನ್ನದೆ ಹಲವು ಕಡೆ ಭೋಜನದ ವ್ಯವಸ್ಥೆ ಮಾಡುತ್ತಿದ್ದಾರೆ. ಈ ಮಹತ್ಕಾರ್ಯದಲ್ಲಿ ಕೈಜೋಡಿಸಿರುವ ಮಾಧ್ಯಮದವರು, ಆರಕ್ಷಕರು, ಆರೋಗ್ಯ ಇಲಾಖೆ, ಜನಪ್ರತಿನಿಧಿಗಳು, ಸಂಘ-ಸಂಸ್ಥೆಗಳು, ಧಾರ್ಮಿಕ ಕೇಂದ್ರಗಳಿಗೆ ನನ್ನ ಅಭಿನಂದನೆಗಳು. ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಕೊರೊನಾ ತಡೆಗಟ್ಟುವಲ್ಲಿ ಹಲವು ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿರುವುದು ಸ್ವಾಗತಾರ್ಹ. ಕರ್ನಾಟಕದಲ್ಲಿ ಸೋಂಕಿತರ ಸಂಖ್ಯೆ ನೂರರ ಗಡಿ ದಾಟುತ್ತಿದೆ. ಇದು ಇಷ್ಟಕ್ಕೆ ನಿಲ್ಲಲಿ. ಕೊರೊನಾ ವೈರಸ್ ಹಿನ್ನಲೆಯಲ್ಲಿ ಕೇಂದ್ರಸರ್ಕಾರ, ರಾಜ್ಯಸರ್ಕಾರ, ಆರೋಗ್ಯ ಇಲಾಖೆ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿರುವುದು ಸ್ವಾಗತಾರ್ಹ ಎಂದರು.



ಇನ್ನು ಮುಂದೆ ಲಾಕ್‌ಡೌನ್ ಮುಗಿಯುವವರೆಗೆ ವಿನಾಯಕ ಕಲ್ಯಾಣ ಮಂಟಪ ಹಾಗೂ ವೆಂಕಟೇಶ್ವರ ಬಡಾವಣೆಯಲ್ಲಿರುವ ನಿರಾಶ್ರಿತರಿಗೆ ಪ್ರತಿನಿತ್ಯ ಬೆಳಗ್ಗೆ ಹಾಗೂ ಸಂಜೆ ಆಹಾರ ವಿತರಿಸುವ ಜವಾಬ್ದಾರಿಯನ್ನು ಶ್ರೀಮಠವು ವಹಿಸಿಕೊಳ್ಳುತ್ತದೆ ಎಂದು ಹೇಳಿದರು.

ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಸ್ವಾಮಿಗಳು, ಶಿರಸಿ ರುದ್ರದೇವರ ಮಠದ ಮಲ್ಲಿಕಾರ್ಜುನ ಸ್ವಾಮಿಗಳು, ಚಳ್ಳಕೆರೆ ಚೆಲುಮೆರುದ್ರಸ್ವಾಮಿಮಠದ ಶ್ರೀ ಬಸವಕಿರಣ ಸ್ವಾಮಿಗಳು, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿಗಳಾದ ಎಂ.ಜಿ.ದೊರೆಸ್ವಾಮಿ, ತಹಶೀಲ್ದಾರ್, ಆರೋಗ್ಯ ಇಲಾಖೆಯ ಅಧಿಕಾರಿಗಳು, ಮುರುಗೇಶ್, ಪಿ.ವೀರೇಂದ್ರಕುಮಾರ್ ಮೊದಲಾದವರಿದ್ದರು.



ನಿರಾಶ್ರಿತರಿಗೆ ಅನ್ನದಾಸೋಹ ಪೂರೈಸಲು ನೆರವಾಗಲು ಇಚ್ಛಿಸುವವರು ಶ್ರೀಮಠದ ವ್ಯವಸ್ಥಾಪಕರಾದ ಎ.ಜೆ.ಪರಮಶಿವಯ್ಯ **- 9448232966,** ಎಂ.ಜಿ.ದೊರೆಸ್ವಾಮಿ **- 8277272867** ಅವರನ್ನು ಸಂಪರ್ಕಿಸಬಹುದಾಗಿದೆ.